# ನಿವೇದನೆ

## ಜಡ್ಡುಗಟ್ಟಿದ ನೌಕರಶಾಹಿ ಆಗಲಿ ಜನಸ್ನೇಹಿ ಜನತಂತ್ರದ ಆಶಯ ಮೈಗೂಡಿಸಿಕೊಳ್ಳಲಿ

**ದುಡಿಯುವ ಪತಿಯನ್ನು ಕಳೆದುಕೊಂಡ ಅಸಹಾಯಕ ಮಹಿಳೆಯೊಬ್ಬರನ್ನು ಪತಿಯ ಮರಣ ದೃಢೀಕರಣ ಪತ್ರಕ್ಕಾಗಿ ವರ್ಷಗಟ್ಟಲೆ ಕಚೇರಿ–ಕೋರ್ಟ್‌ಗೆ ಅಲೆಯುವಂತೆ ಮಾಡಿದ ವ್ಯವಸ್ಥೆಯ ಕ್ರೌರ್ಯಕ್ಕೆ ಏನನ್ನೋಣ?**

ನಮ್ಮ ನೌಕರಶಾಹಿಯನ್ನು ಭ್ರಷ್ಟತೆ ಮತ್ತು ಜಡತ್ವ ಆವರಿಸಿಕೊಂಡಿದೆ ಎಂಬುದು ಜನಜನಿತ. ಜನರ ತೆರಿಗೆ ಹಣದಲ್ಲಿ ಸಂಬಳ–ಸವಲತ್ತು ಪಡೆಯುವ ಸರ್ಕಾರಿ ನೌಕರರು ಈ ವ್ಯವಸ್ಥೆ ಕೊಟ್ಟಿರುವ ಉದ್ಯೋಗದಲ್ಲಿ ತಾವು ಯಾಕೆ ಇದ್ದೇವೆ ಎಂಬುದನ್ನೇ ಮರೆತವರಂತೆ ವರ್ತಿಸುತ್ತಾರೆ. ಎಲ್ಲರೂ ಅಲ್ಲದೇ ಇರಬಹುದು; ಆದರೆ ಹೆಚ್ಚಿನವರು ಈ ಗುಂಪಿಗೇ ಸೇರುತ್ತಾರೆ ಎಂಬ ಭಾವನೆಯು ಸರ್ಕಾರಿ ಕಚೇರಿಗಳಿಗೆ ಎಡತಾಕುವ ಜನಮಾನಸದಲ್ಲಿ ಗಟ್ಟಿಯಾಗಿ ನೆಲೆಯೂರಿದೆ.

ಅಸಹಾಯಕ ವ್ಯಕ್ತಿಯ ಅಳಲಿಗೆ ಸ್ಪಂದಿಸಿದ ಅಧಿಕಾರಿಯೊಬ್ಬ ಆ ವ್ಯಕ್ತಿಯ ಮುಖದಲ್ಲಿ ಮೂಡುವ ಕೃತಜ್ಞತೆಯ ಭಾವದಿಂದ ಹೊಸ ಹುರುಪು ಪಡೆಯಬೇಕು ಮತ್ತು ಅಂತಹ ಹತ್ತಾರು ಕೆಲಸಗಳನ್ನು ಮಾಡಲು ಅದು ಪ್ರೇರಣೆಯಾಗಬೇಕು. ಆದರೆ ಆ ಸಾರ್ಥಕ ಭಾವದ ಖುಷಿಯನ್ನು ಅನುಭವಿಸುವ ಮನಸ್ಥಿತಿ ಸರ್ಕಾರಿ ಕಚೇರಿಗಳಲ್ಲಿ ಕಾಣಸಿಗುವುದಿಲ್ಲ. ಜನರ ಕೆಲಸ ಮಾಡಿಕೊಡಲು ನೇಮಕಗೊಂಡಿರುವ ನೌಕರರು ಎಂಬುದನ್ನು ಮರೆತು ಜನಸಾಮಾನ್ಯರ ಮೇಲೆ ದರ್ಪ, ಅಟ್ಟಹಾಸ ತೋರುತ್ತಾರೆ.

ಸೆಪ್ಟೆಂಬರ್ 8, ಪೂರ್ಣಚಂದ್ರ ತೇಜಸ್ವಿ ಅವರ ಜನ್ಮದಿನ. ತೇಜಸ್ವಿ ಅವರ ಬದುಕು–ಬರಹಗಳಿಗೆ ಸಂಬಂಧಿಸಿದ ನೆನಪುಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದವು. ತೇಜಸ್ವಿ ಅವರ ತಬರನ ಕಥೆಯು ಕನ್ನಡದ ಮನಸ್ಸುಗಳಲ್ಲಿ ನಾಣ್ಣುಡಿ ಎನ್ನುವ ಮಟ್ಟಿಗೆ ನಾಟಿದೆ. ಒಂದಲ್ಲ ಒಂದು ಸಂದರ್ಭದಲ್ಲಿ ನಾವೆಲ್ಲ ತಬರರಾದವರೇ. ತಬರ ಪಿಂಚಣಿಗಾಗಿ ಸರ್ಕಾರಿ ಕಚೇರಿಗಳಿಗೆ ವರ್ಷಗಟ್ಟಲೆ ಅಲೆಯುವ ದಾರುಣ ಸ್ಥಿತಿಯನ್ನು ಈ ಕಥೆ ಕಟ್ಟಿಕೊಡುತ್ತದೆ. ಆ ಕಥೆಯನ್ನು ಓದಿ ಕಿ.ರಂ.ನಾಗರಾಜ ಅವರು 'ತಬರಿಸಂ' ಎಂಬ ಶಬ್ದ ರೂಪಿಸಿದ್ದರಂತೆ. ಅವರ ಪ್ರಕಾರ, 'ಸರ್ಕಾರಿ ಕಚೇರಿಗಳಲ್ಲಿ ಇರುವುದು ಒಂದೇ ಇಸಂ– ಅದೇ ತಬರಿಸಂ'.


ತೇಜಸ್ವಿ ಮತ್ತು ಅವರ ತಬರನ ಕಥೆ ನೆನಪಾಗಿದ್ದಕ್ಕೆ ಕಾರಣ ಇಲ್ಲದಿಲ್ಲ. ಅದೇ ದಿನ, ಅಂದರೆ ಈ ತಿಂಗಳ ಎಂಟರಂದು ಪತ್ರಿಕೆಗಳಲ್ಲಿ, ಪತಿಯ ಮರಣ ದೃಢೀಕರಣ ಪತ್ರಕ್ಕಾಗಿ ಆರು ವರ್ಷಗಳಿಂದ ಅಲೆಯುತ್ತಿರುವ ಮಹಿಳೆಯೊಬ್ಬರ ರಿಟ್ ಅರ್ಜಿಯ ವಿಚಾರಣೆ ವೇಳೆ ಹೈಕೋರ್ಟ್ ನೀಡಿದ ಆದೇಶದ ಸುದ್ದಿ ಕಣ್ಣಿಗೆ ಬಿತ್ತು. ಅದನ್ನು ಓದುತ್ತಾ ಹೋದಂತೆ ತಬರನ ಕಥೆಯ ನೆನಪಿನ ಸುರುಳಿ ಬಿಚ್ಚಿಕೊಳ್ಳುತ್ತ ಹೋಯಿತು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ (ಬಿಬಿಎಂಪಿ) ಎಕ್ಸ್‌ಕವೇಟರ್ ಆಪರೇಟರ್ ಆಗಿ ಕೆಲಸ ನಿರ್ವಹಿಸುತ್ತಿದ್ದ ವ್ಯಕ್ತಿಯೊಬ್ಬರು 2017ರಲ್ಲಿ ಮಳೆ ಅಬ್ಬರಿಸಿದ ಸಂದರ್ಭವೊಂದರಲ್ಲಿ ರಾಜಕಾಲುವೆ ಸ್ವಚ್ಛಗೊಳಿಸುತ್ತಿರಬೇಕಾದರೆ ನೀರಿನ ರಭಸಕ್ಕೆ ಕೊಚ್ಚಿಹೋಗುತ್ತಾರೆ. ಪಾಲಿಕೆಯ ಅಧಿಕಾರಿಗಳ ತೀವ್ರ ಹುಡುಕಾಟದ ನಂತರವೂ ಅವರ ದೇಹ ಪತ್ತೆಯಾಗಿಲ್ಲ. ಅದೇ ಪಾಲಿಕೆಯು ಮೃತ ವ್ಯಕ್ತಿಯ ಕುಟುಂಬಕ್ಕೆ ಮಾನವೀಯ ನೆಲೆಯಲ್ಲಿ ₹ 10 ಲಕ್ಷ ಪರಿಹಾರವನ್ನೂ ನೀಡಿದೆ. ಆದರೆ ಮರಣ ದೃಢೀಕರಣ ಪತ್ರ ನೀಡಲು ನಿರಾಕರಿಸಿದೆ.

ಅರ್ಜಿಯೊಂದಿಗೆ ನಿಯಮಾನುಸಾರ ಇರಬೇಕಾದ ಕೆಲವು ದೃಢೀಕರಣ ಪತ್ರಗಳು ಇಲ್ಲ ಎಂಬುದು ಅದು ತಿರಸ್ಕೃತಗೊಳ್ಳಲು ಕಾರಣ. ಸಾವನ್ನು ವೈದ್ಯರು ದೃಢೀಕರಿಸಿದ ಪ್ರಮಾಣಪತ್ರವನ್ನು ಕರ್ನಾಟಕ ಮರಣ ಮತ್ತು ಜನನ ನೋಂದಣಿ ಅಧಿನಿಯಮದ ಅನುಸಾರ ಅರ್ಜಿ ಜೊತೆ ಲಗತ್ತಿಸಿಲ್ಲ, ಹೀಗಾಗಿ ಮರಣ ದೃಢೀಕರಣ ಪತ್ರ ನೀಡಲಾಗದು ಎಂಬುದು ಪಾಲಿಕೆಯ ವಾದ. ನಮ್ಮ ಅಧಿಕಾರಿಗಳು ಆ ಮಟ್ಟಿಗೆ 'ನಿಯಮನಿಷ್ಠ'ರು! ಬಿಬಿಎಂಪಿಯ ಈ ವಾದವನ್ನು ಹೈಕೋರ್ಟ್ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರು ಸಮರ್ಥನೀಯವಲ್ಲ ಎಂದು ತಳ್ಳಿಹಾಕಿ, 30 ದಿನಗಳ ಒಳಗೆ ಮರಣ ದೃಢೀಕರಣ ಪತ್ರವನ್ನು ನೀಡುವಂತೆ ಆದೇಶಿಸಿದ್ದಾರೆ. ದುಡಿಯುವ ಪತಿಯನ್ನು ಕಳೆದುಕೊಂಡ 32 ವರ್ಷ ವಯಸ್ಸಿನ ಆ ಅಸಹಾಯಕ ಮಹಿಳೆಯು ಪತಿಯ ಮರಣ ದೃಢೀಕರಣ ಪತ್ರಕ್ಕಾಗಿ ಹೀಗೆ ಕಚೇರಿ–ಕೋರ್ಟ್‌ಗೆ ವರ್ಷಗಟ್ಟಲೆ ಅಲೆಯುವಂತೆ ಮಾಡಿದ ವ್ಯವಸ್ಥೆಯ ಕ್ರೌರ್ಯಕ್ಕೆ ಏನನ್ನೋಣ?!

ಜಡ್ಡುಗಟ್ಟಿದ ಈ ವ್ಯವಸ್ಥೆಯಲ್ಲಿ ಜನನ ಪ್ರಮಾಣಪತ್ರ, ಮರಣ ಪ್ರಮಾಣಪತ್ರ ಪಡೆಯುವುದು ಕೂಡ ಹರಸಾಹಸದ ಕೆಲಸವಾಗಿ ಮಾರ್ಪಟ್ಟಿದೆ. ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ, ನೌಕರಿಗಾಗಿ ಲಂಚ– ಪ್ರಭಾವ, ವರ್ಗಾವಣೆ ಎಂಬುದು ದಂಧೆಯಾಗಿರುವ ಈ ವ್ಯವಸ್ಥೆಯಲ್ಲಿ ಅಸಹಾಯಕರ ಅಳಲು ಕೇಳುವವರು ಯಾರು? ರಾಜಕಾರಣಿಗಳು ಅಧಿಕಾರಿಗಳ ಮೇಲೆ ದರ್ಪ ತೋರಿಸುತ್ತಾರೆ, ಅಧಿಕಾರಿಗಳು ಕೆಳಗಿನ ನೌಕರರ ಎದುರು ದೌಲು ಪ್ರದರ್ಶಿಸುತ್ತಾರೆ. ಕೊನೆಗೆ ಎಲ್ಲರೂ ಸೇರಿ ಬಡಪಾಯಿ ಜನರನ್ನು ಗೋಳು ಹೊಯ್ದುಕೊಳ್ಳುತ್ತಾರೆ. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂಭ್ರಮ ಸವಿದಿದ್ದೇವೆ. ಆದರೆ ಜನತಂತ್ರದ ಆಶಯಗಳನ್ನು ಮೈಗೂಡಿಸಿಕೊಳ್ಳಲು ಇನ್ನೂ ಸಾಧ್ಯವಾಗಿಲ್ಲ ಎಂಬುದು ಚೋದ್ಯದ ಸಂಗತಿ.

■ ಎನ್. ಉದಯಕುಮಾರ್



ಈಶ್ವರ್